ಆ) ಹೌದು. ಬಾಗಲಕೋಟೆ ಜಿಲ್ಲೆಯಲ್ಲಿ ಮೇ: ಕೆ.ಎಸ್.ಜೋರ್ ವಲ್ಸ್ ಕಂಪನಿ, ಬಿಜಾಪುರ ಇವರಿಗೆ ಗ್ರಿಲ್ಲಿಂಗ್ ಕಾರ್ಯಾದೇಶ ನೀಡಿದ್ದು ಇವರಿಗೆ ಕೊಳವೆಬಾವಿ ಕೊರೆದ ಬಾಬ್ತು ಪಾವತಿಸಿದೆ.

ಇ) ಉದ್ಭವಿಸುವುದಿಲ್ಲ.

ಈ) ಸರ್ಕಾರದ ಆದೇಶ ಸಂಖ್ಯೆ: ಇ:22:ಎಸ್‌ಡಿಸಿ:2000 ದಿನಾಂಕ: 17-11-2000ದ ಸರ್ಕಾರಿ ಆದೇಶದಂತೆ ಆಯಾ ತಾಲ್ಲೂಕಿನ ಶಾಸಕರ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ಸರ್ಕಾರ ರಚಿಸಿದ್ದು ಈ ಸಮಿತಿಯು ಗಂಗಾ ಕಲ್ಯಾಣ ಹಾಗೂ ವೈಯಕ್ತಿಕ ನೀರಾವರಿ ಕೊಳವೆಬಾವಿ ಯೋಜನೆಯಲ್ಲಿ ಅರ್ಹ ಫಲಾನುಭವಿಗಳನ್ನು ಆಯ್ಕೆ ಮಾಡುವ ಅಧಿಕಾರ ಹೊಂದಿದೆ. ಈ ರೀತಿ ಆಯ್ಕೆ ಮಾಡಿದ ಅರ್ಜಿದಾರರಿಗೆ ನಿಗಮದ ಜಿಲ್ಲಾ ವ್ಯವಸ್ಥಾಪಕರು ಆಯ್ಕೆ ಪಟ್ಟಿಯಲ್ಲಿರುವ ಅರ್ಜಿದಾರರಿಗೆ ಆದ್ಯತೆಯ ಮೇಲೆ ಕೊಳವೆಬಾವಿಗಳನ್ನು ಕೊರೆಯಲು ಕ್ರಮ ಕೈಗೊಳ್ಳಲಾಗುವುದು.

ಹುಲಸೂರು ಮತ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಮೆಹಕರ್ ಗ್ರಾಮಕ್ಕೆ ಎಸ್.ಸಿ : ಎಸ್.ಟಿ. ಹಾಸ್ಟಲ್ ಬಿ.ಸಿ.ಎಂ. ಹಾಸ್ಟಲ್ ಮತ್ತು ಮೊರಾರ್ಜಿ ವಸತಿ ಶಾಲೆಗಳನ್ನು ಮಂಜೂರು ಮಾಡುವುದು.

1978(1918)

ಶ್ರೀ ರಾಜೇಂದ್ರ ವರ್ಮ(ಹುಲ್‌ಸೂರ್): ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಲಸೂರು ಮತ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಮೆಹಕರ್ ಗ್ರಾಮವು ನೆರೆಯ ಮಹಾರಾಷ್ಟ್ರ ರಾಜ್ಯದ ಗಡಿಭಾಗದಲ್ಲಿ ಅತ್ಯಂತ ಹಿಂದುಳಿದ ಗ್ರಾಮವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಆ) ಹಾಗಿದ್ದಲ್ಲಿ ಈ ಗ್ರಾಮದಲ್ಲಿರುವ ಬಡ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಪರಿಶಿಷ್ಟ ಜಾತಿ ಮತ್ತು ವರ್ಗದ ವಿದ್ಯಾರ್ಥಿನಿಲಯ, ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗಾಗಿ ಬಿ.ಸಿ.ಎಂ. ಹಾಸ್ಟಲ್ ಹಾಗೂ ಮೊರಾರ್ಜಿ ವಸತಿ ಶಾಲೆಗಳನ್ನು ಪ್ರಾರಂಭಿಸಲಾಗುವುದೇ?

ಇ) ಹಾಗಿಲ್ಲದಿದ್ದಲ್ಲಿ ಕಾರಣಗಳೇನು?

ಶ್ರೀ ಕಾಗೋಡು ತಿಮ್ಮಪ್ಪ (ಸಮಾಜ ಕಲ್ಯಾಣ ಸಚಿವರು):

ಅ) ಹೌದು.

ಆ) ಪರಿಶೀಲಿಸಲಾಗುವುದು

ಇ) ಉದ್ಭವಿಸುವುದಿಲ್ಲ.

ಹಳ್ಳಿಖೇಡ್(ಬಿ) ಗ್ರಾಮ ಪಂಚಾಯ್ತಿಯನ್ನು ಟಿ.ಎಂ.ಸಿ.ಯನ್ನಾಗಿ ಪರಿವರ್ತಿಸುವುದು.

1979(1920)

ಶ್ರೀ ರಾಜೇಂದ್ರ ವರ್ಮ(ಹುಲಸೂರ್): ಮಾನ್ಯ ಪೌರಾಡಳಿತ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಲಸೂರು ಮತಕ್ಷೇತ್ರದ ವ್ಯಾಪ್ತಿಗೆ ಬರುವ ಹಳ್ಳಿಖೇಡ್(ಬಿ) ಗ್ರಾಮ ಪಂಚಾಯತಿಯು ರಾಜ್ಯದಲ್ಲೀಯೇ ದೊಡ್ಡ ಗ್ರಾಮ ಪಂಚಾಯತಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಈ ಗ್ರಾಮ ಪಂಚಾಯತಿಯನ್ನು ಟೌನ್ ಮುನಿಸಿಪಲ್ ಕೌನ್ಸಿಲ್ ಆಗಿ ಪರಿವರ್ತಿಸಲಾಗುವುದೆಂದು ಕಳೆದ ವರ್ಷ ನಡೆದ ವಿಧಾನ ಸಭೆಯ ಅಧಿವೇಶನದಲ್ಲಿ ಮಾನ್ಯ ಸಚಿವರು ಭರವಸೆ ನೀಡಿದ್ದು ನಿಜವೇ?

ಇ) ಹಾಗಿದ್ದಲ್ಲಿ ಈ ಹಂತದಲ್ಲಿ ಗ್ರಾಮ ಪಂಚಾಯತಿಯನ್ನು ಟಿ.ಎಂ.ಸಿ.ಯನ್ನಾಗಿ ಪರಿವರ್ತಿಸುವ ಬಗ್ಗೆ ಯಾವ ಕ್ರಮಗಳನ್ನು ಸರ್ಕಾರ ಕೈಗೊಳ್ಳಲಾಗಿದೆ?

ಈ) ಈ ವಿಷಯಕ್ಕೆ ಸಂಬಂಧಪಟ್ಟಂತೆ ಬೀದರ್ ಜಿಲ್ಲಾಧಿಕಾರಿಗಳಿಂದ ವರದಿ ತರಿಸಿಕೊಳ್ಳಲಾಗಿದೆಯೇ?

ಉ) ಈ ವಿಷಯದಲ್ಲಿ ಸರ್ಕಾರ ವಿಳಂಬ ಮಾಡುತ್ತಿರಲು ಕಾರಣವೇನು?

ಊ) ಸಾರ್ವಜನಿಕ ಹಿತದೃಷ್ಟಿಯಿಂದ ಆದಷ್ಟು ಶೀಘ್ರವಾಗಿ ಹಳ್ಳಿಖೇಡ್ (ಬಿ) ಗ್ರಾಮ ಪಂಚಾಯತಿಯನ್ನು ಟಿ.ಎಂ.ಸಿ.ಯನ್ನಾಗಿ ಪರಿವರ್ತಿಸಲು ಕ್ರಮ ಕೈಗೊಳ್ಳಲಾಗುವುದೇ?